ನಸುನಕ್ಕಳು. ಹೊರಗೆ ಮಗಳ ಜೊತೆ ಇನ್ನುಳಿದವರು ಜೋರಾಗಿ ಮಾತಾಡುವುದು ಕೇಳುತ್ತಿತ್ತು.

"ಸ್ವಲ್ಪ ದಿನ ನಿನ್ನ ಮನೆಗೆ ಕರ್ಕೊಂಡು ಹೋಗೇ, ಅತ್ತಿಗೆ ಇಲ್ಲಿ ಒಬ್ಬರೇ ಇದ್ರೆ ಅವ್ರು ಅದೇ ಯೋಚನೆ ಮಾಡ್ತಾ ಇರ್ತಾರೆ..."

"ಹೌದು... ಅಮ್ಮ ಒಬ್ಬಳನ್ನೇ ಬಿಟ್ಟು ಹೋಗಲ್ಲ... ಕರ್ಕೊಂಡು ಹೋಗ್ತೀನಿ" ಒಂದೇ ಗುಕ್ಕಿಗೆ ಹೇಳಿದ ಮಗಳು, "ಸ್ವಲ್ಪ ದಿನ ನಮ್ಮನೇಲಿ, ಸ್ವಲ್ಪ ದಿನ ಯಶೂ ಮನೇಲಿ ಇರ್ತಾಳೆ" ಜವಾಬ್ದಾರಿ ತಮ್ಮ ಯಶೂನ ಮೇಲೂ ಇದೆ ಎಂಬುದನ್ನು ಸೂಕ್ಷ್ಮವಾಗಿ ಹೇಳಿದಳು.

ಶಾಂತಾ ಕೇಳಿಸಿಕೊಳ್ಳುತ್ತಿದ್ದಳು. "ನಾನೆಲ್ಲೂ ಬರಲ್ಲಪ್ಪ..." ಶಾಂತಾ ಹೇಳುತ್ತಲೇ ಸದ್ದಾಗದಂತೆ ಬೀರು ತೆಗೆದಳು. ಒಳಗೆ ಲಾಕರಿನಲ್ಲಿದ್ದ ಆಭರಣ ಕರಡಿಗೆಯನ್ನು ಮೆಲ್ಲಗೆ ತೆರೆದಳು. ಹಳೆಯ ಉಂಗುರ, ವಾಲೆಗಳ ಕೆಳಗೆ ಕತ್ತರಿಸಿಟ್ಟಿದ್ದ ಪೇಪರಿನ ಚೂರು. ಜೋರಾಗಿ ಮುಟ್ಟಿದರೂ ಹರಿಯುವಷ್ಟು ಹಳದಿಕಂದು ಬಣ್ಣದಲ್ಲಿದ್ದ ತೆಳ್ಳನೆಯ ಪೇಪರಿನ ಮೇಲೆ ಮಸುಕಾದ ಅಕ್ಷರಗಳು... ಅದನ್ನು ಅಂಗೈಯಲ್ಲಿ ಹಗೂರಕ್ಕೆ ಹಿಡಿದಿದ್ದೇ ದಶಕಗಳ ಹಿಂದೆ ಸಾಗಿ, ಚಿಕ್ಕ ಹುಡುಗಿಯ ಬೆರಗುಗಣ್ಣಿನಲ್ಲಿ ನಿಂತ ಶಾಂತಾ...

ಸೊಸೆ ಅತ್ತೆಯ ಅಂಗೈಯಲ್ಲಿದ್ದ ಪೇಪರಿನ ಕಾಲಾತೀತ ಅಕ್ಷರಗಳನ್ನು ಕೂಡಿಸಿಕೊಳ್ಳುತ್ತ ನಿಧಾನಕ್ಕೆ ಓದಿದಳು... ನಿಬ್ಬೆರಗಾಗಿ ನಿಂತಳು. ಯಾವುದೋ ದೂರದೇಶದ ಹರೆಯದ ಹುಡುಗಿಯೊಬ್ಬಳು ಹಂಪಿ, ಬಾದಾಮಿಯನ್ನು ನೋಡಲು ಒಬ್ಬಳೇ ಬಂದಿದ್ದಳು ಎಂಬ ಸುದ್ದಿ. ಕತ್ತರಿಸಿಟ್ಟುಕೊಂಡ ಆ ಪೇಪರಿನ ತುಣುಕನ್ನು ಯಾರ ಕಣ್ಣಿಗೂ ಬೀಳದಂತೆ ಕಾಪಾಡಿದಂತೆ ಎದೆಯಾಳದಲ್ಲಿ ಆ ಸುದ್ದಿ ಅಕ್ಷರಗಳು ಬಿತ್ತಿದ ಕನಸುಬೀಜವೂ ಮುಕ್ಕಾದಂತೆ, ಹುಳ ಹಿಡಿಯದಂತೆ ಕಾಪಾಡಿಕೊಂಡಿದ್ದ ಶಾಂತ... ಮೊದಲು ಅಪ್ಪ ಅಮ್ಮ, ಅಣ್ಣನ ಜೊತೆ, ನಂತರ ಗಂಡ ಮಕ್ಕಳ ಜೊತೆ... ಎಲ್ಲ ಪ್ರಯಾಣಕ್ಕೂ ಅಕ್ಕಪಕ್ಕ ಒಬ್ಬರಿರಲೇಬೇಕು ಎಂಬೊಂದು ಅಲಿಖಿತ ಕರಾರಿಗೆ ಕಟ್ಟುಬಿದ್ದಂತೆ. 'ಒಬ್ಬಳೇ ಎಲ್ಲಾದರೂ ಸುಮ್ಮನೆ ಸುತ್ತುವ...' ಕಣ್ಣಕನಸಿನ ದನಿಯೇಳದಂತೆ ಅಲ್ಲೇ ಅದುಮುತ್ತ ಕಳೆದು ಹೋದ ವರ್ಷಗಳು.

ಆ ದಿನ ಗಂಡ ಕೊಟ್ಟಿದ್ದ ದುಡ್ಡು ನೆನಪಾಯಿತು. "ಇದೆಲ್ಲ ಮುಗೀಲಿ... ಒಬ್ಬಳೇ ಎಲ್ಲಾದರೂ ಓಡಾಡಿಕೊಂಡು ಬರಬೇಕು ಅನ್ನಿಸಿದೆ... ಸುಮ್ಮನೇ ಹಂಗೇ..."

"ಸುಮ್ಮನೇ... ಮೆತ್ತಗೆ ಸುಳಿಯೋ ಗಾಳಿ ಹಂಗೆ... ಬೆಳಗಿನ ನಸುಬೆಳಕಿನ ಹಂಗೆ..." ಸೊಸೆ ನಕ್ಕಳು. "ಹೂಂ... ಅತ್ತೆ, ಸೊಸೆ ಇಬ್ರಿಗೂ ತಲೆ ಕೆಟ್ಟಿದೆ ಅಂತ ಹೊರಗೆ ಕೂತವರು ಈಗ ಹಾರಿಬೀಳ್ತಾರೆ ಅಷ್ಟೆ" ಪಿಸಿಪಿಸಿ ಹೇಳಿ ನಕ್ಕ ಶಾಂತಳೊಂದಿಗೆ ಸೊಸೆಯ ನಗುವೂ ಸೇರಿ... ಇದೀಗ ಕೋಣೆಯ ಬಾಗಿಲಿಗೆ ಕಿವಿ ಹಚ್ಚಿದ್ದ ಹೊರಕೂತವರು ನಿಜಕ್ಕೂ ಹಾರಿಬಿದ್ದರು.

## ಸುಮಂಗಲಾ

ಮೂಲತಃ ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನವರು. ಪ್ರಸ್ತುತ ಬೆಂಗಳೂರಿನಲ್ಲಿ ವಾಸ ಮತ್ತು ಕೆಲಸ. ಕತೆ, ಜೀವನಚರಿತ್ರೆ, ಲೇಖನಗಳು ಸೇರಿದಂತೆ ಬರವಣಿಗೆಯ ಹಲವು ಪ್ರಕಾರಗಳಲ್ಲಿ ಕೆಲಸ ಮಾಡಿದ್ದಾರೆ. 'ಸೀತಾಳೆ ಹೂ ಮತ್ತು ಇತರ ಕತೆಗಳು', 'ಜುಮುರು ಮಳೆ', 'ಕಾಲಿಟ್ಟಲ್ಲಿ ಕಾಲುದಾರಿ', 'ಹನ್ನೊಂದನೇ ಅಡ್ಡರಸ್ತೆ' ಅವರ ಕಥಾ ಸಂಗ್ರಹಗಳು. ಅವರು ಸಂಗೀತಗಾರ ಪಂ. ರಾಜೀವ್ ತಾರಾನಾಥ್ ಕುರಿತ ಪುಸ್ತಕ 'ಸರೋದ್ ಮಾಂತ್ರಿಕ ಪಂಡಿತ್ ರಾಜೀವ ತಾರಾನಾಥ ಜೀವನ ರಾಗ' ಸಂಪಾದಿಸಿದ್ದಾರೆ.